# ಶ್ರೀಮಾತೆಯವರ ಪತ್ರಗಳು – ೧೫

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

### ಪತ್ರ – ೮೩

೨೭ ನೇ ದಿನ, ಜಯರಾಂಬಾಟಿ
೧೩. ೩. ೧೯೧೩

ಶುಭವಾಗಲಿ.

ತಾಯಿ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿನಗೆ ನನ್ನ ಆಶೀರ್ವಾದ ಹಾಗೂ ಶೋಕಹರಣನಿಗೆ ಮತ್ತು ಸುಮತಿಗೆ ನನ್ನ ಆಶೀರ್ವಾದ ತಿಳಿಸು. ಇತ್ತೀಚೆಗೆ ರಾಧು ಚೆನ್ನಾಗಿದ್ದಾಳೆ. ಇಲ್ಲಿ ಎಲ್ಲವೂ ಕ್ಷೇಮ. ನನ್ನ ಹಲ್ಲು ನೋವು ವಾಸಿಯಾಗಿದೆ. ನೀವೆಲ್ಲರೂ ಚೆನ್ನಾಗಿರುವಿರಿ ಎಂದು ಆಶಿಸುತ್ತೇನೆ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶ್ರೀಮತಿ ಸರಯೂಬಾಲಾ ದೇವಿ*
*Calcatta ೪/೧ ಮನೋಹರ ಪುಕುರ್ ರೋಡ್*
*ಕಾಳಿಘಾಟ್, ಕಲ್ಕತ್ತಾ*

### ಪತ್ರ – ೮೪

೨೩.೩.೧೯೧೩
ಚೈತ್ರ ೮, ಜಯರಾಂಬಾಟಿ
Anur, Hughly

ಶುಭವಾಗಲಿ.

ಮಗೂ, ನಿನ್ನಪತ್ರ ಸಿಕ್ಕಿ ಸಮಾಧಾನವಾಯಿತು. ಕುಲಗುರುವಿಗೆ ವಾಡಿಕೆಯಂತೆ ವರ್ಷಾಶನವನ್ನು ಕೊಡಬೇಕು. ಬೇರೆ ಇನ್ನೇನಾದರೂ ಕೊಡಲು ಸಾಧ್ಯವಾದರೆ ಕೊಡು. ಧನವನ್ನು ಕೊಟ್ಟು ಸಂತುಷ್ಟಿಗೊಳಿಸಲು, ಅಷ್ಟೊಂದು ಧನ ನಿನಗೆ ಎಲ್ಲಿಂದ ಸಿಗುವುದು? ಇಲ್ಲಿ ನಾನು ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ ಹಾಗೂ ಸೊಸೆ ಮತ್ತು ಮಕ್ಕಳಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ಶ್ರೀ ಠಾಕೂರರು ನಿನಗೆ ಮಂಗಳವನ್ನುಂಟುಮಾಡಲಿ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*Babu TarakNath Roy Chowdhury*
*Sub Registrar*
*Kathiadi , (Dt. Mymensingh )*

### ಪತ್ರ – ೮೫

೧೪ನೇ ಚೈತ್ರ
ಜಯರಾಂಬಾಟಿ
೨೭.೩.೧೯೧೩

ಶುಭವಾಗಲಿ.

ತಾಯಿ, ನಿನ್ನ ಪತ್ರವು ಸಿಕ್ಕಿ ಸಂತುಷ್ಟಳಾದೆ. ಸದ್ಯ ನಾವೆಲ್ಲರೂ ಚೆನ್ನಾಗಿದ್ದೇವೆ. ನಿನಗೆ ನನ್ನ ಆಶೀರ್ವಾದ. ಶ್ರೀ ಠಾಕೂರರು ನಿನ್ನನ್ನು ಕ್ಷೇಮವಾಗಿ ಇಟ್ಟಿರಲಿ. ನೀವೆಲ್ಲರೂ ಚೆನ್ನಾಗಿರುವಿರೆಂದು ಆಶಿಸುತ್ತಿದ್ದೇನೆ.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶೀಮತಿ ಸರಯೂಬಾಲಾ ದೇವಿ*
*C/O Dr.G.C.Sen*
*P.O. Meherpur, Dt.Nadia*

### ಪತ್ರ – ೮೬

೬.೪–೧೯೧೩
ಚೈತ್ರ ೨೧, ಜಯರಾಂಬಾಟಿ

ಶುಭವಾಗಲಿ.

ಮಗೂ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿನ್ನ ಹಿಂದಿನ ಪತ್ರಕ್ಕೂ ಉತ್ತರ ಬರೆದಿರುವೆ. ಇಷ್ಟರಲ್ಲಿ ಸಿಕ್ಕಿರಬಹುದು ಅನ್ನಿಸುತ್ತದೆ. ನೀನು ಕಳುಹಿಸಿರುವ ೧೦ ರೂಪಾಯಿ ತಲುಪಿ ಸಂತುಷ್ಟಳಾದೆ. ಇಲ್ಲಿ ಎಲ್ಲವೂ ಕ್ಷೇಮ. ನಾನು ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ ಹಾಗೂ ಸೊಸೆ ಮತ್ತು ಮಕ್ಕಳಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ಶ್ರೀ ಠಾಕೂರರು ನಿಮಗೆಲ್ಲರಿಗೂ ಮಂಗಳವನ್ನುಂಟುಮಾಡಲಿ. ನೀವೆಲ್ಲರೂ ಕ್ಷೇಮವಾಗಿದ್ದೀರೆಂದು ಆಶಿಸುತ್ತೇನೆ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶ್ರೀ ತಾರಕನಾಥ್ ರಾಯ್ ಚೌಧುರಿ*
*ಸಬ್ – ರೆಜಿಸ್ಟ್ರಾರ್*
*ಕಥಿಯಾದಿ ಪೋಸ್ಟ್, (ಮೈಮನ್‌ಸಿಂಗ್ ) (Mymensing)*